


ಆಚರಣೆಗಳು ಸ್ವಲ್ಪ ಬೇರೆಯಾಗಿರುತ್ತವೆ. ಕೆಲವೊಮ್ಮೆ ಬಹಳ ವ್ಯತ್ಯಾಸವೂ ಇರಬಹುದು. ಅಂತಹ ಸಂಪ್ರದಾಯಗಳಲ್ಲಿ 'ನಾಗಾ' (ನಗ್ನ) ಸಂಪ್ರದಾಯವೂ ಒಂದು. ಕ್ರಿ.ಪೂ.೩೫೩ರಷ್ಟು ಹಿಂದೆಯೇ, ನಗ್ನ ತತ್ತ್ವಜ್ಞಾನಿಗಳನ್ನು ತಾನು ಭೇಟಿಮಾಡಿದುದಾಗಿ ಗ್ರೀಕ್ ದೊರೆ ಅಲೆಗ್ಸಾಂಡರ್ ಉಲ್ಲೇಖಿಸಿದ್ದಾನೆ. ಜೈನರ ಕೊನೆಯ ತೀರ್ಥಂಕರನಾದ ಮಹಾವೀರನೂ ನಗ್ನ ಸಾಧುವಾಗಿದ್ದನು. ಇದೇ ವಿಧಾನವನ್ನು ವೃಷಭದೇವ, ಶುಕದೇವ, ಜಡಭರತ ಮುಂತಾದ ಅವಧೂತರು ಅನುಸರಿಸಿದ್ದರೆಂಬುದನ್ನು ಪುರಾಣಗ್ರಂಥಗಳಲ್ಲಿ ಓದುತ್ತೇವೆ. ಈ ಸಂದರ್ಭದಲ್ಲಿ ನಗ್ನತೆಯನ್ನು ಅಶ್ಲೀಲವೆಂದು ಪರಿಗಣಿಸಬಾರದು. ಇದು ತೀವ್ರ ವೈರಾಗ್ಯದ, ಈ ನಶ್ವರ ಪ್ರಪಂಚದ ಬಗೆಗಿನ ಉತ್ಕಟ ಉದಾಸೀನತೆಯ ಪ್ರತೀಕ; ಒಂದು ಬಟ್ಟೆಯ ತುಂಡು ಕೂಡ ಅನವಶ್ಯವೆಂಬ ಭಾವನೆ.

೧೫ ನೇ ಶತಮಾನದ ಸಂತ–ವಿದ್ವಾಂಸರಾದ ಮಧುಸೂದನ ಸರಸ್ವತಿಗಳ ಹೆಸರನ್ನು ನಾಗಾಸಾಧುಗಳ ಪ್ರಾಚೀನತೆಯನ್ನು ಎತ್ತಿತೋರಿಸಲು ಬಳಸುವುದುಂಟು. ಆ ಕಾಲದ ಬಗ್ಗೆ ಪ್ರೊ. ಫರ್ಗುಸನ್ ಹೀಗೆ ಹೇಳುತ್ತಾರೆ: "ವಾರಾಣಸಿಯಂತಹ ತೀರ್ಥಕ್ಷೇತ್ರಗಳಲ್ಲಿಯೂ ಕೈಗೆ ಸಿಕ್ಕ ಹಿಂದೂಗಳನ್ನು, ಅವರು ಗೃಹಸ್ಥರಿರಲಿ, ಸಂನ್ಯಾಸಿಗಳಿರಲಿ, ಕೊಂದುಹಾಕಿ 'ಉತ್ತಮ ಮುಸ್ಲಿಮ್' ಎನಿಸಿಕೊಳ್ಳುವ ಪರಿಪಾಠ ಮುಸ್ಲಿಂ ಮೌಲ್ವಿಗಳಲ್ಲಿ ಇತ್ತು. ಸೂಕ್ತ ಕಾನೂನು ಇಲ್ಲದ ಕಾರಣದಿಂದ ಅವರು ಶಿಕ್ಷೆಯಿಂದ ತಪ್ಪಿಸಿಕೊಳ್ಳುತ್ತಿದ್ದರು. ದುರ್ಬಲರಾದ ಹಿಂದೂಗಳು ಈ ಅನ್ಯಾಯವನ್ನು ತಡೆಯಲು ಮಧುಸೂದನ ಸರಸ್ವತಿಯವರಿಗೆ ಏನಾದರೂ ಮಾಡುವಂತೆ ಕೇಳಿಕೊಂಡರು. ಅಕ್ಬರನ ದರ್ಬಾರಿನಲ್ಲಿ ಮಧುಸೂದನರಿಗೆ ಒಳ್ಳೆಯ ಹೆಸರಿತ್ತು. ಅವರು ಬೀರಬಲ್ಲನ ಮೂಲಕ ಚಕ್ರವರ್ತಿಯನ್ನು ಭೇಟಿಯಾಗಿ, ವಾರಾಣಸಿಯಲ್ಲಿ ನಡೆಯುತ್ತಿದ್ದ ಮತೀಯ ದೌರ್ಜನ್ಯದ ಬಗ್ಗೆ ನಿವೇದಿಸಿದರು. ಆಗ ಚಕ್ರವರ್ತಿಯು ಹಿಂದೂಧರ್ಮ ಮತ್ತು ಅದರ ಅನುಯಾಯಿಗಳನ್ನು ರಕ್ಷಿಸಿಕೊಳ್ಳಲು ಮಧುಸೂದನರನೇ ವೀರರಾದ ಸಂನ್ಯಾಸಿಗಳ ಪಡೆಯೊಂದನ್ನು ರಚಿಸುವಂತೆ ಹೇಳಿದ. ಇದಲ್ಲದೆ, ಮುಸ್ಲಿಂ ಮೌಲ್ವಿಗಳಂತೆಯೇ ಹಿಂದೂ ಸಂನ್ಯಾಸಿಗಳೂ ಕಾನೂನಿನ ಶಿಕ್ಷೆಯ ಪರಿಧಿಯಿಂದ ಹೊರಗಿದ್ದಾರೆಂದು ಘೋಷಿಸಿದ. ಹೀಗೆ ವೇದಾಂತಿ ಸಂನ್ಯಾಸಿಗಳಾದ ನಾಗಾ ಸಾಧುಗಳ ಪಂಗಡ ಅಸ್ತಿತ್ವಕ್ಕೆ ಬಂದಿತು. ಇದಕ್ಕೆ ಸೇರಿಕೊಳ್ಳುವವರು ಬಹುತೇಕ ಕ್ಷತ್ರಿಯ ಜನಾಂಗದವರು. ಇವರು ಅಖಾಡಾಗಳೆಂದು ಕರೆಯುವ ಮಠಗಳಲ್ಲಿ ವಾಸಿಸುತ್ತಾರೆ; ಹೋರಾಟದ ತರಬೇತಿಯನ್ನು ಹೊಂದಿರುತ್ತಾರೆ."

ಕೆಲವರು ಈ ಸಂನ್ಯಾಸಿಗಳ ವೇಷ ಶಿವನ ಅನುಕರಣೆಯಾಗಿದೆ ಎಂದು ಹೇಳುತ್ತಾರೆ. ಅವರ ಪ್ರಕಾರ ದಿಗಂಬರತ್ವವು ಶುದ್ಧ ಮನಸ್ಸಿನ ಪ್ರತೀಕ; ಅದು ಕಾಮ, ಲೋಭ, ಅಸೂಯೆ ಮೊದಲಾದ ಕೀಳುಭಾವನೆಗಳಿಂದ ಮುಕ್ತವಾದ ಸ್ಥಿತಿ. ಐದು ವರ್ಷ ವಯಸ್ಸಿನ ಬಾಲಕನ ಮನಸ್ಥಿತಿಯನ್ನು ಅದು ಹೋಲುತ್ತದೆ.

ಒಂದು ಆಕರದ ಪ್ರಕಾರ ಸಂನ್ಯಾಸಿಗಳಲ್ಲಿ ಎರಡು ವಿಧ: ಶಾಸ್ತ್ರಧಾರಿ ಮತ್ತು ಶಸ್ತ್ರಧಾರಿ. ಎರಡನೆಯ ವರ್ಗದವರು ಕುಸ್ತಿಪಟುಗಳಾಗಿರುತ್ತಾರೆ. ಅಲ್ಲದೆ ಕತ್ತಿವರಸೆ, ದಂಡ ಪ್ರಯೋಗಗಳಲ್ಲಿಯೂ ನಿಷ್ಣಾತರಾಗಿರುತ್ತಾರೆ. ಹಿಂದೂಧರ್ಮದ ರಕ್ಷಣೆಯ ಜವಾಬ್ದಾರಿಯನ್ನು ಹೊತ್ತ ಇವರು ಅಖಾಡಾಗಳಲ್ಲಿ ವಾಸಿಸುತ್ತಾರೆ. ಪ್ರತಿ ಅಖಾಡಾಕ್ಕೂ ತನ್ನದೇ ಆದ ಇಷ್ಟದೇವತೆ, ಗುರುಪರಂಪರೆ ಮತ್ತು ವೇದಶಾಖೆಗಳಿವೆ. ಅಲ್ಲದೆ ಅವಕ್ಕೇ ವಿಶೇಷವಾದ ಭಿನ್ನ ಭಿನ್ನ ಸಂಪ್ರದಾಯಗಳಿವೆ.

ಮಧ್ಯಯುಗದಲ್ಲಿ ಶಸ್ತ್ರಧಾರಿ ನಾಗಾ ಸಾಧುಗಳು ಬಲವಂತ ಮತಾಂತರ ಮತ್ತು ಮತಾಂಧರ ದಾಳಿಗಳಿಂದ ಹಿಂದೂ ಸಮಾಜವನ್ನು ರಕ್ಷಿಸಲು ಹೋರಾಡುತ್ತಿದ್ದರು. ಪವಿತ್ರ ದೇವಾಲಯಗಳು ಮತ್ತು ತೀರ್ಥಕ್ಷೇತ್ರಗಳನ್ನು ಕಾಪಾಡಲು ಅಖಾಡಾಗಳು ಹಲವಾರು ಯುದ್ಧಗಳಲ್ಲಿ ಭಾಗವಹಿಸಿದ್ದೂ ಇದೆ. ಉದಾಹರಣೆಗೆ, ೧೬೬೬ರಲ್ಲಿ ಹರಿದ್ವಾರದ ರಕ್ಷಣೆಗಾಗಿ, ೧೭೪೫ರಲ್ಲಿ ಪ್ರಯಾಗವನ್ನು ಅಹಮದ್ ಷಾ ಅಬ್ದಾಲಿಯ ದಾಳಿಯಿಂದ ಕಾಪಾಡಲು ಮತ್ತು ೧೭೫೭ರಲ್ಲಿ ಮಥುರಾ ಬಳಿಯ ಗೋಕುಲವನ್ನು ಸಂರಕ್ಷಿಸಲು ನಡೆದ ಯುದ್ಧಗಳಲ್ಲಿ ಈ ಸಾಧುಗಳು ಭಾಗವಹಿಸಿದ್ದರು.

ಈ ಬಗೆಯ ಧರ್ಮರಕ್ಷಣಾ ಕಾರ್ಯಕ್ಕಾಗಿ ಕರೆನೀಡುವ ಸಮಯವಾಗಿ ಕುಂಭಮೇಳವನ್ನು ಬಳಸಿಕೊಳ್ಳುವ ಪದ್ಧತಿ ಜಾರಿಯಲ್ಲಿದೆ. ಪ್ರಸ್ತುತ ನಾಗಾ ಸಾಧುಗಳು ಅಹಿಂಸೆಯನ್ನೇ ಪಾಲಿಸುತ್ತಾರೆ. ಆದರೂ ಅವರಲ್ಲಿ ಹಲವರು ಕುಸ್ತಿಯ ತರಬೇತಿಯನ್ನು ಹೊಂದಿರುತ್ತಾರೆ.

ಸಾಮಾನ್ಯವಾಗಿ ಎಂಟು ಅಖಾಡಾಗಳ ನಾಗಾ ಸಾಧುಗಳು ಪ್ರಮುಖರೆಂದು ಹೇಳಲಾಗುತ್ತದೆ: ಅವರೆಂದರೆ, ಆಹ್ವಾನ್, ಅಗ್ನಿ, ಆನಂದ್, ಅಟಲ್, ಗುಡದ್, ಜುನಾ, ನಿರಂಜನೀ ಮತ್ತು ನಿರ್ವಾಣೀ ಅಖಾಡಾಗಳು. ಇವುಗಳಲ್ಲಿ ಜುನಾ, ನಿರಂಜನೀ ಮತ್ತು ನಿರ್ವಾಣೀ ಅಖಾಡಾಗಳು ಅತ್ಯಂತ ಜನಪ್ರಿಯವಾದುವು.

(ಮುಂದುವರಿಯುವುದು)

# ಆಚಾರ್ಯತ್ರಯರು

ಎಚ್.ವಿ.ಸರೋಜ

ನರ್ಮದಾ ತೀರದಿಂದ ಶಂಕರರು ವಿಶ್ವೇಶ್ವರನ ದರ್ಶನಕ್ಕಾಗಿ ಕಾಶೀಕ್ಷೇತ್ರಕ್ಕೆ ಹೊರಟರು. ಅಲ್ಲಿಂದಲೇ ಅವರ ಧರ್ಮ ವಿಜಯ ಪ್ರಾರಂಭವಾಯಿತು. ಅದಕ್ಕೆ ಮುಂಚೆ ತಾಯಿ ಅನ್ನಪೂರ್ಣೆಯ ದರ್ಶನವನ್ನು ಪಡೆದರು. ಆಕೆಯಲ್ಲಿ ಶಂಕರರು ಈ ಭಿಕ್ಷೆ ಬೇಡಿದರು – **ಜ್ಞಾನವೈರಾಗ್ಯಸಿದ್ಧ್ಯರ್ಥಂ ಭಿಕ್ಷಾಂ ದೇಹಿ ಚ ಪಾರ್ವತಿ** "ಹೇ ಪಾರ್ವತಿ, ಜ್ಞಾನ ಮತ್ತು ವೈರಾಗ್ಯಗಳನ್ನು ಸಿದ್ಧಿಸಿಕೊಳ್ಳುವಂತಹ ಭಿಕ್ಷೆಯನ್ನು ನೀಡು, ತಾಯಿ!" ವಯಸ್ಸಿಗೆ ಮೀರಿದ ತೇಜಸ್ಸಿನಿಂದ ಕೂಡಿದ ಈ ಬಾಲಸನ್ಯಾಸಿಯ ಸುಂದರರೂಪ ಎಲ್ಲರನ್ನೂ ಬೆರಗುಗೊಳಿಸಿತು. ಅವರು ತಮ್ಮ ಪ್ರಬೋಧಪೂರ್ಣ ವೇದಾಂತ ಪ್ರವಚನದಿಂದ ವಾರಾಣಸಿಯ ವಿದ್ವತ್ ಸಮೂಹದ ಗಮನವನ್ನು ಸೆಳೆದರು. ಅವರ ತಪಃಪ್ರಭಾವದ ಸನ್ನಿಧಿಯಲ್ಲಿ ಅನೇಕರು ಅಪಾರ ಶಾಂತಿಯನ್ನು ಅನುಭವಿಸಿದರು. ಹೀಗೆ ಈ ಬಾಲಯತಿ ಬಹಳ ಬೇಗನೆ ಅನೇಕ ಜನರನ್ನು ತಮ್ಮ ಕಡೆಗೆ ಆಕರ್ಷಿಸಿದರು.



ಕಾಶೀ ನಗರದಲ್ಲಿ ಒಂದು ಘಟನೆ ನಡೆಯಿತು. ಅಂದು ಅರುಣೋದಯದ ಸಮಯ. ಶಂಕರರು ಗಂಗಾಸ್ನಾನಕ್ಕೆ ಹೊರಟಿದ್ದಾರೆ. ಒಬ್ಬ ಚಂಡಾಲ ನಾಯಿಗಳ ಸಹಿತ ಅವರ ದಾರಿಗೆ ಅಡ್ಡವಾಗಿ ಬಂದ. ಚಂಡಾಲನ ದೇಹ ತಮಗೆ ಸೋಂಕಬಾರದೆಂದು ಶಂಕರರು, "ದೂರ ಸರಿ" ಎಂದರು. ಆಗ ಅವನು, "ಚಂಡಾಲ ಎಂದು ಯಾರನ್ನು ತಾನೇ ನೀವು ಕರೆಯುತ್ತಿದ್ದೀರಿ? ಈ ದೇಹವನ್ನೋ ಅಥವಾ ಆತ್ಮವನ್ನೋ? ನಿಮ್ಮ ದೇಹದಂತೆ ನನ್ನ ದೇಹವೂ ಮಣ್ಣಿನಿಂದ ಆದುದಲ್ಲವೇ? ಆತ್ಮಕ್ಕೆ ಚಂಡಾಲತ್ವವಿದೆಯೇ? ಸರ್ವವ್ಯಾಪಿಯಾದ ಆತ್ಮ ಸರಿಯುವುದಾದರೂ ಎಲ್ಲಿಗೆ? ಆತ್ಮರೂಪವೇ ಆಗಿರುವ ನನಗೂ ನಿಮಗೂ ಯಾವುದಾದರೂ ಭೇದವಿದೆಯೇ?" ಎಂದನು.

ಆಗ ಶಂಕರರಿಗೆ ಜ್ಞಾನೋದಯವಾಯಿತು. ಈ ಮನುಷ್ಯ ಸಾಮಾನ್ಯನಲ್ಲ. ಆತ್ಮಸ್ವರೂಪದ ಲಕ್ಷಣವನ್ನು ಎಷ್ಟು ಸುಲಲಿತವಾಗಿ ಹೇಳುತ್ತಿದ್ದಾನೆ! ಈತ ಪರಮಾತ್ಮನೇ ಸರಿ ಎಂದು ಅರಿತುಕೊಂಡರು ಶಂಕರರು. ಅದಲ್ಲದೆ, ಅದ್ವೈತ ತತ್ತ್ವದ ಜ್ಞಾನವನ್ನು ಪಡೆದಿದ್ದರೂ ಸಹ, ಮೇಲು ಕೀಳು ಎಂಬ ಮಾಯೆಗೆ ಸಿಕ್ಕಿದ್ದೆನಲ್ಲಾ ಎಂದು ನೊಂದುಕೊಂಡರು. ಅದನ್ನು ದೂರ ಮಾಡಿದ, ಚಂಡಾಲರೂಪದ ಆ ಭಗವದ್‌ಸ್ವರೂಪಿಗೆ ಸಾಷ್ಟಾಂಗ ನಮಸ್ಕಾರ ಮಾಡಿದರು. "ವಿಷ್ಣು, ಶಿವ ಇತ್ಯಾದಿ ದೇವತೆಗಳಲ್ಲಿ ಸ್ಫುರಿಸುವ ಆತ್ಮಚೈತನ್ಯವೇ ಕ್ರಿಮಿ, ಕೀಟ ಮುಂತಾದ ಕ್ಷುದ್ರ ಜಂತುಗಳಲ್ಲಿಯೂ ಸ್ಫುರಿಸುತ್ತದೆ. ಆ ಚೈತನ್ಯವೇ ಆತ್ಮಸ್ವರೂಪವೆಂದು ತಿಳಿಯುವ ವ್ಯಕ್ತಿ ವಿದ್ವಾಂಸನಾಗಿರಲಿ ಅಥವಾ ಚಂಡಾಲನೇ ಆಗಿರಲಿ, ಅವನೇ ನನ್ನ ಗುರು" ಎನ್ನುತ್ತ ಸ್ತೋತ್ರಮಾಡಿದರು. ಭಗವಾನ್ ವಿಶ್ವನಾಥನೇ ಶಂಕರರಲ್ಲಿದ್ದ ಲೋಪವನ್ನು ಕಳೆಯಲು ಚಂಡಾಲ ವೇಷವನ್ನು ಧರಿಸಿ ಬಂದಿದ್ದನು. ಈಗ ಅವನ ಪರೀಕ್ಷೆ ಮುಗಿದಿದೆ. ಅವನು ತನ್ನ ನಿಜರೂಪವನ್ನು ಧರಿಸಿ, "ವತ್ಸ ಶಂಕರ, ನಿನ್ನಲ್ಲಿ ನಾನು ಪ್ರಸನ್ನನಾಗಿದ್ದೇನೆ. ನಿನ್ನ ಮೂಲಕ ಈ ಜಗತ್ತಿನಲ್ಲಿ ವೈದಿಕಧರ್ಮದ ಪ್ರಚಾರ ಆಗಬೇಕೆಂದು ನನ್ನ ಇಚ್ಛೆ" ಎಂದನು. ಶ್ರೀಶಂಕರರು ಭಗವಾನ್ ವಿಶ್ವನಾಥನನ್ನು ಕುರಿತು ಮನಸಾರೆ ಸ್ತುತಿ ಮಾಡಿದರು.

## ಬದರಿಕಾಶ್ರಮದತ್ತ

ಆಚಾರ್ಯರು ಕಾಶಿಗೆ ಬಂದ ಉದ್ದೇಶ ನೆರವೇರಿತ್ತು. ಅವರು ಅಲ್ಲಿ ಅನೇಕ ಘನವಿದ್ವಾಂಸರೊಡನೆ ಚರ್ಚೆ–ವಿಮರ್ಶೆ ಮಾಡಿದರು. ಈಗ ಗುರುಗಳ ಆಜ್ಞೆಯಂತೆ ಭಾಷ್ಯರಚನೆಯನ್ನು ಮಾಡಬೇಕೆಂದು ಯೋಚಿಸಿದರು. ಬದರೀನಾಥಕ್ಕೆ ಹೋಗಿ ಆ ಕಾರ್ಯವನ್ನು ಕೈಗೊಳ್ಳಬೇಕೆಂದು ಸಂಕಲ್ಪಿಸಿದರು. ಅದನ್ನು ಕಷ್ಟಪಟ್ಟು ತಲುಪಿದರು. ಬದರೀನಾಥವನ್ನು ಬದರಿಕಾಶ್ರಮವೆಂದೂ ಕರೆಯುತ್ತಾರೆ. ಅದು ನರ ಮತ್ತು ನಾರಾಯಣರೆಂಬ ಇಬ್ಬರು ಋಷಿಗಳು